ಶ್ರೀ ಪಂಪಾಪತಿ.—(ಅ) ಉತ್ತರದಲ್ಲಿ ೬೦೦ ಕೇಸಸ್ ಅನ್ನು ಕೋರ್ಟ್‌ಗೆ ಹಾಜರ್ಪಡಿಸಿಲ್ಲವೆಂದು ಹೇಳಿದ್ದೀರಿ. ಇದಕ್ಕೆ ಕಾರಣವೇನು ?

† ಶ್ರೀ ಆರ್. ಎಸ್. ಪಾಟೀಲ್.—ಕಾರಣಗಳು ಏನು ಎಂಬುದನ್ನು ಸಂಬಧಿಸಿದ ಪಾರ್ಟಿಗಳಿಗೆ ತಿಳಿಸಲಾಗಿದೆ.

ಶ್ರೀ ಪಂಪಾಪತಿ.—ಪಾರ್ಟಿಗಳಿಗೆ ತಿಳಿಸಿದ್ದೀರೆಂಬುದು ಗೊತ್ತಾಗಿದೆ. ಅವರು ವಿಚಾರ ಮಾಡಿದ್ದನ್ನೇ ತಾವು ಒಪ್ಪಿಕೊಂಡು ಕೋರ್ಟಿಗೆ ಒಪ್ಪಿಸದ್ದಿರೆ ಕಾರ್ಮಿಕರಿಗೆ ಅನ್ಯಾಯವಾಗುವುದಿಲ್ಲವೆ ?

ಶ್ರೀ ಆರ್. ಎಸ್. ಪಾಟೀಲ್.—ಅವರು ಮಾಡಿದ್ದನ್ನೇ ಸರ್ಕಾರ ಒಪ್ಪಿಕೊಳ್ಳುತ್ತದೆಂಬ ವಾದವನ್ನು ಒಪ್ಪುವುದಿಲ್ಲ. ಸರ್ಕಾರ ಕೂಡ ಆ ಬಗ್ಗೆ ಪರಿಶೀಲನೆ ಮಾಡಿ ಅವು ಕೋರ್ಟಿಗೆ ರೆಫರ್ ಮಾಡುವುದಕ್ಕೆ ಯೋಗ್ಯವಾದವು ಎಂದು ಕಂಡುಬಂದರೆ ಮಾಡುತ್ತದೆ, ಇಲ್ಲವಾದರೆ ಮಾಡುವುದಿಲ್ಲ ; ಆದರಂತೆ (೫) ಉತ್ತರದಲ್ಲಿ ನೋಡಬಹುದು ; ಪುನರಪರಿಶೀಲನೆಗಾಗಿ ೩೧ ಮನವಿಗಳು ಬಂದಿವೆ. ನ್ಯಾಯ ನಿರ್ಣಯಕ್ಕಾಗಿ ಕಳುಹಿಸಿದ ನಾಲ್ಕು ಪ್ರಕರಣಗಳ ಪೈಕಿ ಮೂರನ್ನು ಈಗಾಗಲೇ ತಿರಸ್ಕರಿಸಲಾಗಿದೆ. ಆರು ಪ್ರಕರಣಗಳ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದಕ್ಕೆ ನ್ಯಾಯ ನಿರ್ಣಯಕ್ಕಾಗಿ ಕಳುಹಿಸಲಾಗಿದೆ. ಹಾಗೂ ಇನ್ನುಳಿದ ೧೮ ಪ್ರಕರಣಗಳು ಸರ್ಕಾರದ ಪರಿಶೀಲನೆಯಲ್ಲಿವೆ. ಇಷ್ಟರಲ್ಲಿ ೩೧ ಜನ ಮನವಿಗಳನ್ನು ಕಳುಹಿಸಿದ್ದಾರೆ.

ಶ್ರೀ ಪಂಪಾಪತಿ.—ಮಾಲೀಕರ ಮತ್ತು ಕಾರ್ಮಿಕರ ಮಧ್ಯೆ ವಿವಾದ ಬಂದಾಗ ಇಂಥ ಪ್ರಶ್ನೆ ಉದ್ಭವವಾಗುತ್ತದೆ. ಆಗ ನ್ಯಾಯಾಲಯಕ್ಕೆ ಹೋಗುವುದಕ್ಕೆ ಅವಕಾಶ ಕೊಟ್ಟರೆ ಅಲ್ಲಿ ನ್ಯಾಯ–ಅನ್ಯಾಯ ತೀರ್ಮಾನವಾಗುತ್ತದೆ. ಅದನ್ನು ಬಿಟ್ಟು ನೀವೇ ಇಲ್ಲಿ ನ್ಯಾಯಬದ್ಧವಾಗಿಲ್ಲವೆಂದು ವಜಾ ಮಾಡತಕ್ಕದ್ದು ನ್ಯಾಯಸಮ್ಮತವೆಲ್ಲವೆಂದು ನನ್ನ ಅಭಿಪ್ರಾಯ. ಆದ್ದರಿಂದ, ೧೫೬೩ ಜನ ಕೆಲಸಗಾರರಿಂದ ಬಂದಿರತಕ್ಕ ಕೇಸುಗಳನ್ನೆಲ್ಲ ನ್ಯಾಯಾಂಗಕ್ಕೆ ಒಪ್ಪಿಸಲು ಪ್ರಯತ್ನ ಮಾಡುತ್ತೀರಾ ?

ಶ್ರೀ ಆರ್. ಎಸ್. ಪಾಟೀಲ್.—ರಿಜಿಕ್ ಮಾಡಿದ ಕೇಸುಗಳಲ್ಲಿ ಬಹಳಷ್ಟು ಟರ್ಮಿನೇಷನ್ ಆಫ್ ದಿ ಸೆಟಲ್‌ಮೆಂಟ್ ಆಗಿರುತ್ತವೆ. ಬರತಕ್ಕ ಹಣವನ್ನೆಲ್ಲ ತೆಗೆದುಕೊಂಡು ಸೆಟಲ್ ಮಾಡಿಕೊಂಡಿರುತ್ತಾರೆ. ಅಂಥವನ್ನು ಹೇಗೆ ರೆಫರ್ ಮಾಡುವುದು ? ಎಲ್ಲ ವ್ಯವಹಾರಗಳನ್ನು ಮುಗಿಸಿಕೊಂಡು ಹೋಗಿರತಕಂಥವರ ಕೇಸುಗಳನ್ನು ರೆಫರ್ ಮಾಡುವುದಕ್ಕೆ ಬರುವುದಿಲ್ಲ. ಅವುಗಳ ಪೈಕಿ ಇಂಥ ಪ್ರಕರಣಗಳು ರೆಫರ್ ಮಾಡುವುದಕ್ಕೆ ಯೋಗ್ಯವಾಗಿವೆ ಎಂಬುದನ್ನು ಗಮನಕ್ಕೆ ತಂದರೆ ಪರಿಶೀಲಿಸುತ್ತೇವೆ.

Compensating loss of fee income from special group

322 SRI P. A. PAWASHE (Uchagaon)—

Will the Minister for Law, Social Welfare and Backward Classes be pleased to state :—

(a) whether it is a fact that the Government is compensating the loss of fee income to the colleges of the students belonging to Special Groups ;

(b) whether there is a circular from the Department not to collect fees from students belonging to Special Groups ;

(c) whether it has come to the Government that great hardship is caused to these colleges which are not getting the maintenance grant or which are not brought under the direct payment scheme; and

(d) whetner the Government had made any provision to compensate such colleges towdards the loss of fee income immediately taking into consideration the above fact ?

SRI L.G. HAVANUR.—(Minister for Law, Social Welfare and Backward Classes)—

(a) Yes.

(b) No.

(c) Yes.

(d) Yes.

SRI P. A. PAWASHE.—Reply to my question (b) it has been stated no, but according to my information such a circular has been issued. May I know the reason for the same, because as a result of issue of such a circular, great hardship has been caused to some of the colleges ?

†SRI L. G. HAVANUR.—To my knowledge there is on such circular issued in respect of special groups. In fact there was a general circular issued in respect of all the private collegeges in respect of special group. Now we have made a provision of Rs. 4 crores for reimbursement to educational institutions which have not collected fees from the students.

SRI P. A. PAWASHE.—What steps have been taken to remove the hardship caused to colleges which are not getting the maintenance grant and which are not brought under the "direct payment scheme"?

SRI L. G. HAVANUR.—Whether a particular institution gets any grant or not, if they not collected fees as a result of Government Order, they can approach the Director of Backward Classes who after verification would make reimbursement to the extent to which an institution has not collected the fees.

ಶ್ರೀ ಎಸ್. ಆರ್. ಬೊಮ್ಮಾಯಿ : ಕೆಲವು ಕಡೆ ವಿದ್ಯಾರ್ಥಿಗಳಿಗೆ ಕೊಟ್ಟಂತಹ ೪ ಕೋಟಿ ರೂಪಾಯಿ ಹಣವನ್ನು ತೆಗೆದುಕೊಳ್ಳುವುದಕ್ಕೆ ತೊಂದರೆಗಳು ಉಂಟಾಗಿವೆ ಎಂಬುದು ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿದೆಯೆ ? ಅವರು ಸೋಷಿಯಲ್ ವೆಲ್‌ಫೇರ್ ಡೈರೆಕ್ಟರ್ ಹತ್ತಿರ ಹೋಗಿ ಯಾವ್ಯಾವ ವಿದ್ಯಾರ್ಥಿಗಳು ಅರ್ಹರು ಎಂದು ವೆರಿಫೈ ಮಾಡಿಸಿ ತೆಗೆದುಕೊಳ್ಳುವುದಕ್ಕೆ ಬದಲಾಗಿ ಅರ್ಹರಾದ ವಿದ್ಯಾರ್ಥಿಗಳಿಗೆ ಕಾಲೇಜಿನಲ್ಲಿ ಕೊಡತಕ್ಕ ವ್ಯವಸ್ಥೆ ಹಿಂದೆ ಇತ್ತು ; ಆ ರೀತಿ ಈಗಲೂ ಮಾಡುತ್ತೀರಾ ?

ಶ್ರೀ ಎಲ್. ಜಿ. ಹಾವನೂರ್ :—ಯಾವುದೇ ಶಿಕ್ಷಣ ಸಂಸ್ಥೆಯಾಗಲಿ ವಿದ್ಯಾರ್ಥಿಗಳಿಂದ ಶುಲ್ಕವನ್ನು ತೆಗೆದುಕೊಳ್ಳದಿದ್ದರೆ ಅಂಥವರಿಗೆ ಹಣವನ್ನು ವಾಪಸ್ಸು ಕೊಡಬೇಕೆಂದು ಕ್ಯಾಬಿನೆಟ್‌ನಲ್ಲಿ ತೀರ್ಮಾನವಾಗಿದೆ ಮತ್ತು ಸರ್ಕಾರಿ ಆಜ್ಞೆ ಕೂಡ ಹೊರಡಿಸಲಾಗಿದೆ. ಮಾರ್ಚ್ ೩೧ ರೊಳಗೆ ಕೆಲವರಿಗೆ ಆ ಬಗ್ಗೆ ಸ್ಟೇಟಮೆಂಟ್ ಕಳುಹಿಸಿಕೊಡುವುದಕ್ಕಾಗುವುದಿಲ್ಲವೆಂದು ೬ ತಿಂಗಳವರೆಗೆ ಅವಧಿಯನ್ನು ಕೂಡ ಕೊಡಲಾಗಿದೆ. ಕಳೆದ ವರ್ಷಕ್ಕೆ ಸಂಬಂಧಿಸಿದ ೪ ಕೋಟಿ ರೂಪಾಯೀ ಹಣವನ್ನು ಡೈರೆಕ್ಟರ್ ಹತ್ತಿರ ಕೊಡಲಾಗಿದೆ. ಯಾವುದಾದರೂ ಶಿಕ್ಷಣ ಸಂಸ್ಥೆ ವಿದ್ಯಾರ್ಥಿಗಳಿಂದ ಶುಲ್ಕ ವಸೂಲ್ಮಾಡದೆ ಇದ್ದು ಸ್ಟೇಟಮೆಂಟನ್ನು ಕಳುಹಿಸಿಕೊಟ್ಟರೆ, ಆದು ಡೈರೆಕ್ಟರಿಗೆ ತೃಪ್ತಿಕರವಾದ ಪಕ್ಷದಲ್ಲಿ ಹಣವನ್ನು ವಾಪಸ್ಸು ಕೊಡಲಾಗುವುದು.

SRI P. A. PAWASHE.—In this respect, a lot of delay is caused in getting this amount. What steps government propose to take to see that it is expedited early ?

SRI L. G. HAVANUR.—Indeed in 1968, the fee concessions were extended to the Backward Classes. The expression "backward classes or backward classes indentified", covered very small numer of communities and without anticipating the likely expenditure required to be incurred, afther the acceptance of the Backward Classes Commission Report, the Government issued a Government Order in 1977 extending similar benefits to all backward classes. We came to know some of the educational institutions and even the students were put to hardship. but in the circumstances it was inevitable. Now we have made Rs. 13 crores for the purpoes of making reimbursement. I think, the little hardship or inconvenience that has been to the students in the educational institutions is of course very much minimised.

ಶ್ರೀ ಎಸ್. ಆರ್. ಬೊಮ್ಮಾಯಿ.—ತಾವು ಹೇಳಿದಂತೆ, ಸಾರ್ಕಾರ ಆಜ್ಞೆಯನ್ನು ಹೊರಡಿಸಿರುವುದು ಸ್ವಾಗತಾರ್ಹವಾದುದು. ತಡವಾದರೂ ಹಣ ಒದಗಿಸಿದ್ದೀರಿ. ಯಾವ ವಿದ್ಯಾರ್ಥಿಗಳು ಅರ್ಹರೋ ಅವರನ್ನು ಗುರುತಿಸಿ ಅವರಿಗೆ ಕಾಲೇಜಿನಲ್ಲೇ ಕೊಡತಕ್ಕ ಒಂದು ವ್ಯವಸ್ಥೆ ಹಿಂದೆ ಇತ್ತು, ಅದರೆ ಈಗ ಇಲ್ಲ ; ಅವರು ಡೈರೆಕ್ಟರ್ ಹತ್ತಿರ ಬಂದು ತೆಗೆದುಕೊಂಡು ಹೋಗುವುದಕ್ಕೆ ಬಹಳ ಕಷ್ಟವಾಗುತ್ತದೆ, ಅದಕಾರಣ ಅರ್ಹರಾದ ವಿದ್ಯಾರ್ಥಿಗಳಿಗೆ ಕಾಲೇಜನಲ್ಲೇ ಕೊಡತಕ್ಕ ವ್ಯವಸ್ಥೆಯನ್ನು ಮಾಡುತ್ತೀರಾ ಎಂಬುದು ನನ್ನ ಪ್ರಶ್ನೆ.

ಶ್ರೀ ಎಲ್.ಜಿ. ಹಾವನೂರ್.—ಸ್ವಾಮಿ, ಮಾನ್ಯ ವಿರೋಧಪಕ್ಷದ ನಾಯಕರು ಕೊಟ್ಟಂತಹ ಸಲಹೆಯನ್ನು ನಾನು ಸಾಧ್ಯವಾದಮಟ್ಟಿಗೆ ವಿಚಾರ ಮಾಡಿ ವಿದ್ಯಾರ್ಥಿಗಳಿಗೆ ಶಾಲೆ ಮತ್ತು ಕಾಲೇಜುಗಳ ಮೂಲಕ ಹಣ ಕೊಡುವುದಕ್ಕೆ ಅದು ವ್ಯವಹಾರಿಕವಾಗಿ ಯೋಗ್ಯವೆಂದು ಕಂಡುಬಂದರೆ ಹಾಗೂ ಅಲ್ಲಿ ಹಣದ ಅಪವ್ಯಯ ಆಗುವುದಿಲ್ಲವೆಂದು ಕಂಡು ಬಂದರೆ ಆ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಸ್ವಾಮಿ, ಈ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿಗೆ ಕಾಲೇಜು ವಿದ್ಯಾರ್ಥಿಗಳು ಹಣಕ್ಕೋಸ್ಕರ ಹೋದರೆ ಅಲ್ಲಿ ಆಫೀಸರ್‌ಗಳು ಕೂಡಲೇ ಹಣವನ್ನು ಕೊಡುವುದಿಲ್ಲ. ಹುಡುಗರು ಕಾಲೇಜಿಗೂ, ಡಿಪಾರ್ಟ್‌ಮೆಂಟಿಗೂ ಓಡಾಡಬೇಕಾಗುತ್ತದೆ. ಇದರಿಂದ ಅವರಿಗೆ ಸಮಯ ಹಾಳಾಗುತ್ತಿದೆ. ಕೆಲವು ಕಡೆಗಳಲ್ಲಿ ಈ ಆಫೀಸರ್‌ಗಳು ವಿದ್ಯಾರ್ಥಿಗಳಿಂದ ದುಡ್ಡನ್ನು ವಸೂಲು ಮಾಡುತ್ತಿದ್ದಾರೆ ಎಂಬುದಾಗಿ ನನಗೆ ಕಂಪ್ಲೈಂಟ್‌ಗಳು ಬಂದಿವೆ. ಆದ್ದರಿಂದ ಯಾರು ಅರ್ಹರಾದಂಥ ವಿದ್ಯಾರ್ಥಿಗಳು ಇದ್ದಾರೆ ಅವರಿಗೆ ಕಾಲೇಜಿನಲ್ಲಿ ಚೆಕ್‌ಮೂಲಕ ಹಣ ಕೊಡುವ ವ್ಯವಸ್ಥೆಯಾಗಬೇಕು. ಈ ರೀತಿ ಚೆಕ್ ಮೂಲಕ ಹಣ ಕೊಟ್ಟರೆ ಹಣ ಅಪವ್ಯಯವಾಗತಕ್ಕಂಥ ಪರಿಸ್ಥಿತಿ ಬರುವುದಿಲ್ಲ. ಇದನ್ನು ಕಾಲೇಜಿನಲ್ಲಿಯೇ ಕೊಡುವುದರಿಂದ ವಿದ್ಯಾರ್ಥಿಗಳಿಗೆ ಸಮಯವೂ ಹಾಳಾಗುವುದಿಲ್ಲ. ಆದ್ದರಿಂದ ಈ ಒಂದು ವ್ಯವಸ್ಥೆಯನ್ನು ತಾವು ಜಾಗ್ರತೆ ಮಾಡುತ್ತೀರಾ?

ಶ್ರೀ ಎಲ್.ಜಿ. ಹಾವನೂರ್.—ಸ್ವಾಮಿ, ಮಾನ್ಯ ಬೊಮ್ಮಾಯಿಯವರು ಹೇಳಿದಹಾಗೆ ವಿದ್ಯಾರ್ಥಿಗಳಿಗೆ ಸಧ್ಯಕ್ಕೆ ಚೆಕ್ ಮೂಲಕ ಹಣ ಕೊಡುವುದಕ್ಕೆ ಆಗುವುದಿಲ್ಲ. ಏಕೆಂದರೆ ವೆರಿಫಿಕೇಷನ್‌ನಲ್ಲಿ ತೊಂದರೆಯಾಗುತ್ತದೆ. ವಿದ್ಯಾರ್ಥಿಗಳು ಫೀ ಕಟ್ಟಿದ ರಸೀದಿಯನ್ನು ತೋರಿಸಿದರೆ ಅಲ್ಲಿ ಅವರು ಸೂಕ್ತ ಪಣಷನ್ನು ಕೊಡುತ್ತಾರೆ. ನನ್ನ ವಿಚಾರದ ಪ್ರಕಾರ ನನ್ನ ಖಾತೆಯಲ್ಲಿ ದಕ್ಷರಾದ, ಪ್ರಾಮಾಣಿಕರಾದ ಅಧಿಕಾರಿಗಳು ಇದ್ದಾರೆ. ಇದು ನನ್ನ ಸುದೈವ ಎಂದು ನಾನು ಭಾವಿಸುತ್ತೇನೆ. ಈ ಬಗ್ಗೆ ಹಿಂದಿನ ವಿಷಯ ನನಗೆ ಏನೂ ಗೊತ್ತಿಲ್ಲ. ಹಾಗೇನಾದರೂ ಒಬ್ಬ ಅಧಿಕಾರಿ ವಿದ್ಯಾರ್ಥಿಗಳಿಂದ ಹಣವನ್ನು ಕೇಳಿದ್ದಾನೆ ಎಂಬುದಾಗಿ ಮಾನ್ಯ ವಿರೋಧಪಕ್ಷದ ನಾಯಕರ ನಜರಿಗೆ ಬಂದಿದ್ದರೆ, ಆ ಬಗ್ಗೆ ಉದಾಹರಣೆಯನ್ನು ಕೊಟ್ಟರೆ ಅವನ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ನಾನು ಹಿಂಜರಿಯುವುದಿಲ್ಲ.

ಶ್ರೀ ಎಸ್.ಆರ್. ಬೊಮ್ಮಾಯಿ.—ಸ್ವಾಮಿ, ಬಹಳ ಹಿಂದೆ ಮಾನ್ಯ ಮುಂತ್ರಿಯವರು ನಮ್ಮ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನಲ್ಲಿ ನನ್ನ ಆಜ್ಞೆಗಳನ್ನು ನಮ್ಮ ಅಧಿಕಾರಿಗಳೇ ಪಾಲಿಸುತ್ತಾ ಇಲ್ಲ ಎಂದು ಹೇಳಿದ್ದಾರೆ. ಅಲ್ಲಿರತಕ್ಕಂಥ ಎಲ್ಲರೂ ದಕ್ಷರು, ಪ್ರಾಮಾಣಿಕರು ಆಗಿದ್ದಾರೆ ಎಂದು ನಾನು ಹೇಳುವುದಿಲ್ಲ. ಅವರಲ್ಲಿ ದಕ್ಷರಾದವರು, ಪ್ರಾಮಾಣಿಕರಾದವರು ಇದ್ದಾರೆ; ಅವರ ಜೊತೆಗೆ ಅಪ್ರಾಮಾಣಿಕರು, ಅಧ್ಯಕ್ಷರೂ ಇದ್ದಾರೆ. ಇವರಿಂದ ಈಗ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ. ಆದ್ದರಿಂದ ಕಾಲೇಜಿನಲ್ಲಿ ವಿದ್ಯಾರ್ಥಿಗಳು ಫೀ ರಿಸೀಟ್ಸ್ ತೋರಿಸಿದರೆ ಅದನ್ನು ವೆರಿಫೈ ಮಾಡಿ ಅವರಿಗೆ ಹಣ ಕೊಡುವ ವ್ಯವಸ್ಥೆ ಮಾಡಬೇಕು.

ಶ್ರೀ ಎಲ್.ಜಿ. ಹಾವನೂರ್.—ತಾವು ಈ ಬಗ್ಗೆ ಯಾವುದೇ ಸಲಹೆಯನ್ನು ಕೊಟ್ಟರೂ ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ಎಂ.ಪಿ. ಬಸಪ್ಪ.—ಸ್ವಾಮಿ, ತಮ್ಮ ಇಲಾಖೆಯಲ್ಲಿ ವಿದ್ಯಾರ್ಥಿಗಳಿಗೆ ಶುಲ್ಕದ ಬಗ್ಗೆ ವಿನಾಯಿತಿ ಕೊಡುವುದೇ ಆಗಲೀ, ಸ್ಕಾಲರ್‌ಷಿಪ್ ಕೊಡುವುದೇ ಆಗಲೀ ಅದನ್ನು ಪ್ರತಿವರ್ಷ ಮಾರ್ಚ್ ೩೧ನೇ ತಾರೀಖು ಕಳೆದಮೇಲೆ ನಿಧಾನವಾಗಿ ಕೊಡುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ. ಅದನ್ನು ಇನ್ನೂ ಮುಂಚಿತವಾಗಿ ಕೊಡುವ ಬಗ್ಗೆ ತಾವು ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಎಲ್.ಜಿ. ಹಾವನೂರ್.—೨ ವರ್ಷಗಳಿಂದ ಆದಂಥ ಒಂದು ಪರಿಣಾಮ ಇದು. ಅನೇಕ ಕಾರಣಗಳಿಂದ ಈ ರೀತಿ ತಪ್ಪಾಗಿದೆ. ಶಿಕ್ಷಣ ಸಂಸ್ಥೆಗಳಿಗೆ ಮತ್ತು ವಿದ್ಯಾರ್ಥಿಗಳಿಗೆ ಆದಂಥ ತೊಂದರೆಯಿಂದಾಗಿ ಈಗ ನಾವು ಅವರಿಗೆ ದುಡ್ಡು ಕೊಟ್ಟಿದ್ದೇವೆ. ಇನ್ನು ಮುಂದೆ ಅಂತ ತೊಂದರೆಯಾಗದಂತೆ ನೋಡಿಕೊಳ್ಳಲು ಈಗಾಗಲೇ ನಾವು ಒಂದು ಜಿ.ಓ ಹೊರಡಿಸಿದ್ದೇವೆ. ಮತ್ತು ವಿದ್ಯಾರ್ಥಿಗಳಿಗೆ ಒಂದು ವರ್ಷದ ನಂತರ ಫ್ರೀಷಿಪ್ ಮತ್ತು ಸ್ಕಾಲರ್‌ಷಿಪ್‌ಗಳನ್ನು ಕೊಡುವುದರ ಬದಲಾಗಿ ಆಯಾವರ್ಷವೇ ಅವರಿಗೆ ಹಣವನ್ನು ಕೊಡಲು ಡೆಪ್ಯುಟಿ ಕಮಿಷನರ್‌ರವರಿಗೆ ಸಾಕಷ್ಟು ಹಣವನ್ನು ನಾವು ಕೊಟ್ಟಿದ್ದೇವೆ. ಅಲ್ಲದೇ ಅಲ್ಲಲ್ಲಿ ಶಿಕ್ಷಣ ಸಂಸ್ಥೆಗಳು ಮತ್ತು ವಿದ್ಯಾರ್ಥಿಗಳು ಸರಿಯಾದ ಸರ್ಟಿಫಿಕೇಟ್ ಕೊಟ್ಟರೆ, ಬೊನ ಫೈಡ್ ಸ್ಟೂಡೆಂಟ್ಸ್ ಹಾಗೂ ಬ್ಯಾಕ್‌ವರ್ಡ್‌ಕ್ಲಾಸ್ ಸ್ಟೂಡೆಂಟ್ಸ್ ತೃಪ್ತಿಕರವಾದ ಸರ್ಟಿಫಿಕೇಟ್ ಕೊಟ್ಟರೆ ಅವರಿಗೆ ಸಲ್ಲಬೇಕಾದ ಹಣವನ್ನು ಪ್ರತಿ ತಿಂಗಳು ಕೊಡಬೇಕು ಎಂಬ ಒಂದು ಹೊಸ ಯೋಜನೆಯನ್ನು ಮಾಡಿದ್ದೇವೆ: ಇದಕ್ಕಾಗಿ ಈ ವರ್ಷ ಮುಂದಿನ ೪ ತಿಂಗಳಿಗಾಗಿ ಹಣವನ್ನು ಕೊಟ್ಟಿದ್ದೇವೆ. ಆದ್ದರಿಂದ ಬಹುಷಃ ಈ ವರ್ಷದಿಂದ ಅಂತಹ ಯಾವ ತೊಂದರೆಗಳೂ ವಿದ್ಯಾರ್ಥಿಗಳಿಗೆ ಆಗುವುದಿಲ್ಲವೆಂದು ನಾನು ಹೇಳುತ್ತೇನೆ.

ಅಧ್ಯಕ್ಷರು.—ಮಾನ್ಯ ಬಸಪ್ಪನವರ ಪ್ರಶ್ನೆ, ೩೧೧ (೫೯೬) ನ್ನು ಹೆಲ್ಡ್‌ಓವರ್ ಮಾಡಿದ್ದೇನೆ.

Inclusion of some more Communities in the list of Backward Communities.

(623) SRI H. GANGADHARAN (Krishnaraj).—Will the Minister for Law, Social Welfare and Backward Class be pleased to state.

(*a*) whether it is not a fact that the Minister for Law, Social Welfare and Backward Classes made a statement in Chickmagalur District at the time of Bye-Elections, that some more communities, are going to be included in the list of Backward Communities;

(*b*) if so which are those communities and when are they going to be included in the list of Backward Class Communities?